ಈ ಲೇಖನದ ವಿಷಯಾನುಕ್ರಮಣಿಕೆ


31-01-2018 ಚಂದ್ರಗ್ರಹಣದ ಆಚರಣೆ 2

ಬೆಳಗಿನಿಂದ ರಾತ್ರಿಯವರೆಗೆ 2

ಗ್ರಸ್ತೋದಯ ಎಂದರೇನು? 4

ಬುಧವಾರ ಸೂರ್ಯೋದಯದಿಂದ ಗ್ರಹಣ ಮುಗಿಯುವವರೆಗೆ ಆಹಾರ ಸ್ವೀಕರಿಸಬಾರದು 5

ಅಶಕ್ತರು ಮಧ್ಯಾಹ್ನ 2:12 ರವರೆಗೆ ಆಹಾರ ಸ್ವೀಕರಿಸಬಹುದು 7

ಚಂದ್ರೋದಯದ ಸಮಯಕ್ಕೆ ಸ್ಪರ್ಶ ಸ್ನಾನ, ಸೂರ್ಯಾಸ್ತದ ಸಮಯಕ್ಕಲ್ಲ 10

ಗ್ರಹಣದ ಕಾಲದ ಅನುಷ್ಠಾನಗಳು 13

ಆಶ್ಲೇಷಾನಕ್ಷತ್ರದವರಿಗೆ ಸೂಚನೆ 14

ಮೈಲಿಗೆ ಇರುವವರು ಏನು ಮಾಡಬೇಕು 15

ಶೂದ್ರರ ಆಚರಣೆ ಹೇಗೆ 16

ಗ್ರಹಣದ ಕುರಿತ ಲೇಖನಗಳ ಲಿಂಕುಗಳು 18

# ವಿಶ್ವನಂದಿನಿ ಲೇಖನಮಾಲೆ – 257

## 31-01-2018 ಚಂದ್ರಗ್ರಹಣದ ಆಚರಣೆ

ಹೇಮಲಂಬ ಸಂವತ್ಸರದ ಮಾಘ ಶುದ್ಧ ಪೌರ್ಣಿಮೆಯಂದು ಗ್ರಸ್ತೋದಯ ಚಂದ್ರಗ್ರಹಣವಿದೆ. ಅದರ ಕುರಿತ ವಿವರಗಳು ಹೀಗಿವೆ –

## ಬೆಳಗಿನಿಂದ ರಾತ್ರಿಯವರೆಗೆ

ಸೂರ್ಯೋದಯಕ್ಕಿಂತ ಮುಂಚೆ ನಿರ್ಮಾಲ್ಯ ವಿಸರ್ಜನೆ.

ಸೂರ್ಯೋದಯದಿಂದ ಗ್ರಹಣ ಮುಗಿಯುವವರೆಗೆ ಯಾವುದೇ ರೀತಿಯ ಆಹಾರ ಸ್ವೀಕರಿಸಬಾರದು.

ಅಶಕ್ತರು (ಖಾಯಿಲೆ ಇರುವವರು, ಬಸುರಿ, ಬಾಣಂತಿಯರು, ಮಕ್ಕಳು) ಮಧ್ಯಾಹ್ನ 2:12 ರವರೆಗೆ ಆಹಾರ ಸ್ವೀಕರಿಸಬಹುದು.

ಚಂದ್ರೋದಯದ ಸಮಯಕ್ಕೆ ಸ್ಪರ್ಶಸ್ನಾನ. ಗ್ರಹಣಕಾಲದಲ್ಲಿ, ಜಪ, ಪಾರಾಯಣ, ದಾನ ಇತ್ಯಾದಿಗಳು.

ಗ್ರಹಣ ಮೋಕ್ಷ 08:42ಕ್ಕೆ. ಗ್ರಹಣಮುಕ್ತವಾದ ಚಂದ್ರಬಿಂಬವನ್ನು ಕಂಡು ಸ್ನಾನವನ್ನು ಮಾಡಬೇಕು.

ಆ ನಂತರ ಅಡಿಗೆ ಪೂಜೆಯನ್ನು ಮಾಡಿ ಊಟ ಮಾಡಬೇಕು. ಗುರುಗಳಿಗೆ ಹಸ್ತೋದಕ ಮಾಡಬಾರದು. ನೈವೇದ್ಯ, ವೈಶ್ವದೇವಗಳನ್ನು ಮಾಡಿ ಊಟ ಮಾಡಬಹುದು.

ಊಟ ಮಾಡಲು ಅಪೇಕ್ಷೆ ಇಲ್ಲದವರು, ಅವಕಾಶ ಇಲ್ಲದವರು ಫಲಾಹಾರವನ್ನು ಮಾಡಬಹುದು. ಒಟ್ಟಾರೆ ಗ್ರಹಣ ಮುಗಿದ ಬಳಿಕ ಸ್ನಾನ, ಪೂಜಾದಿಗಳನ್ನು ಮುಗಿಸಿ ಆಹಾರ ಸ್ವೀಕರಿಸಬಹುದು.

ಇದರ ಕುರಿತ ಪೂರ್ಣ ವಿವರಣೆಯನ್ನು ನೀಡುತ್ತನೆ.

## ಗ್ರಸ್ತೋದಯ ಎಂದರೇನು?

ಸೂರ್ಯ ಮತ್ತು ಚಂದ್ರರು ಉದಯವಾಗುವದಕ್ಕಿಂತ (ನಮ್ಮ ಕಣ್ಣಿಗೆ ಕಾಣುವದಕ್ಕಿಂತ) ಮುಂಚೆಯೇ ಗ್ರಹಣ ಆರಂಭವಾಗಿದ್ದರೆ ಗ್ರಸ್ತೋದಯ ಎನ್ನುತ್ತಾರೆ.

31ನೆಯ ತಾರೀಕು ಸಂಜೆ 06:15 ರ ಸುಮಾರಿಗೆ ಚಂದ್ರೋದಯವಾಗುತ್ತದೆ. ಆದರೆ ಗ್ರಹಣ ಸಂಜೆ ಐದು ಗಂಟೆಯ ಸುಮಾರಿಗೇ ಆರಂಭವಾಗುತ್ತದೆ. ಹೀಗಾಗಿ, ಚಂದ್ರೋದಯವಾಗುವಾಗಲೇ ಗ್ರಹಣ ನಮಗೆ ಕಾಣಿಸುತ್ತದೆ. ಹೀಗಾಗಿ ಇದು ಗ್ರಸ್ತೋದಯ.

ಗ್ರಸ್ತ ಎಂದರೆ ‘ಹಿಡಿದದ್ದು’ ಎಂದರ್ಥ. ಚಂದ್ರ ಸೂರ್ಯರು ಗ್ರಸ್ತರಾಗಿ ಉದಯರಾದರೆ ಅದನ್ನು ಗ್ರಸ್ತೋದಯ ಗ್ರಹಣ ಎನ್ನುತ್ತಾರೆ.

# ಬುಧವಾರ ಸೂರ್ಯೋದಯದಿಂದ ಗ್ರಹಣ ಮುಗಿಯುವವರೆಗೆ ಆಹಾರ ಸ್ವೀಕರಿಸಬಾರದು

ವೇಧ ಎಂದರೇನು? ವೇಧಕಾಲದಲ್ಲಿ ಮಾಡಬೇಕಾದ್ದು ಮತ್ತು ಮಾಡಬಾರದ್ದೇನು ಎನ್ನುವದನ್ನು ವಿಸ್ತೃತವಾಗಿ ಬರೆದು ಗ್ರಹಣ ಎಂಬ ವಿಭಾಗದಲ್ಲಿ ವಿಶ್ವನಂದಿನಿಯಲ್ಲಿ ಪ್ರಕಟಿಸಿದ್ದೇನೆ.

ಕೆಳಗಿನ ಅಕ್ಷರಗಳನ್ನು ಒತ್ತಿದಲ್ಲಿ ಆ ಲೇಖನ ತೆರೆದುಕೊಳ್ಳುತ್ತದೆ.

ಗ್ರಹಣದ ಅನುಷ್ಠಾನಗಳು

ಸಂಜೆಯಲ್ಲಿ ಗ್ರಹಣವಾದಾಗ ವೇಧದ ಆಚರಣೆ ಹೇಗೆ ಎಂಬ ಪ್ರಶ್ನೆಗೆ ಸ್ಕಂದಪುರಾಣ ಹೀಗೆ ಉತ್ತರ ನೀಡುತ್ತದೆ —

**ಪೂರ್ವಂ ನಿಶೀಥಾದ್ ಗ್ರಹಣಂ**
**ಯದಾ ಚಂದ್ರಸ್ಯ ವೈ ಭವೇತ್ ।**
**ತದಾ ದಿವಾ ನ ಕರ್ತವ್ಯಂ**
**ಭೋಜನಂ ಶಿಖಿವಾಹನ ।।**

ಸೂರ್ಯಾಸ್ತದ ನಂತರ, ಮಧ್ಯರಾತ್ರಿಯ ಮಧ್ಯದಲ್ಲಿ ಚಂದ್ರಗ್ರಹಣವಾದರೆ ಆ ಹಗಲು ಪೂರ್ಣವಾಗಿ ಊಟ ಮಾಡಬಾರದು[1].

ವಸಿಷ್ಠರು ಇನ್ನೂ ಸುಸ್ಪಷ್ಟವಾಗಿ ಹೇಳುತ್ತಾರೆ —

**ಗ್ರಸ್ತೋದಯೇ ವಿಧೋಃ ಪೂರ್ವಂ**
**ನಾಹರ್ಭೋಜನಮಾಚರೇತ್ ।**

ಗ್ರಸ್ತೋದಯ ಗ್ರಹಣವಿದ್ದಾಗ ಆ ಹಗಲಿನಲ್ಲಿ ಭೋಜನ ಮಾಡಬಾರದು.

ಹೇಮಲಂಬದ ಮಾಘ ಶುದ್ಧ ಪೌರ್ಣಿಮೆಯಂದು ಗ್ರಸ್ತೋದಯ ಚಂದ್ರಗ್ರಹಣ ಇರುವದರಿಂದ, ಆ ಇಡಿಯ ಹಗಲಿನಲ್ಲಿ ಅಂದರೆ 31ನೆಯ ತಾರೀಕು ಬುಧವಾರ ವೇಧ ಇರುತ್ತದೆ. ಹೀಗಾಗಿ ಊಟ ಮಾಡುವಂತಿಲ್ಲ. ಏನನ್ನೂ ಸೇವಿಸುವಂತಿಲ್ಲ.

---

[1] ಏಕೆ ಊಟ ಮಾಡಬಾರದು ಎಂಬ ಪ್ರಶ್ನೆಗೆ ಉತ್ತರ ಪಡೆಯಲು ಈ ಶಬ್ದಗಳಲ್ಲಿ ಯಾವುದೇ ಶಬ್ದವನ್ನು ಒತ್ತಿ. ಲೇಖನ ತೆರೆದುಕೊಳ್ಳುತ್ತದೆ.

## ಅಶಕ್ತರು ಮಧ್ಯಾಹ್ನ 2:12 ರವರೆಗೆ ಆಹಾರ ಸ್ವೀಕರಿಸಬಹುದು

ಖಾಯಿಲೆಯಿಂದ ಬಳಲುತ್ತಿರುವವರು, ಗರ್ಭಿಣಿ, ಬಾಣಂತಿಯರು, ವೃದ್ಧರು, ಹಸಿವನ್ನು ತಡೆಯಲಾರದ ಮಕ್ಕಳು ಇವರೆಲ್ಲರನ್ನು ಶಾಸ್ತ್ರ ಅಶಕ್ತರು ಎಂದು ಪರಿಗಣಿಸುತ್ತದೆ.

ಇವರಿಗೆ ಭೋಜನದ ವೇಳೆಯಲ್ಲಿ ವಿನಾಯಿತಿ ಇರುತ್ತದೆ.

ಮಾರ್ಕಂಡೇಯ ಋಷಿಗಳು ಈ ವಿಷಯವನ್ನು ಸುಸ್ಪಷ್ಟವಾಗಿ ತಿಳಿಸಿದ್ದಾರೆ —

**ಸಾಯಾಹ್ನೇ ಗ್ರಹಣಂ ಚೇತ್ ಸ್ಯಾತ್**
**ಅಪರಾಹ್ಣೇ ನ ಭೋಜನಮ್**

ಸಾಯಂಕಾಲದಲ್ಲಿ ಗ್ರಹಣವಿದ್ದಾಗ, ಅಪರಾಹ್ಣದಲ್ಲಿ ಅಶಕ್ತರು ಭೋಜನ ಮಾಡುವಂತಿಲ್ಲ. ಅಂದರೆ ಅಪರಾಹ್ಣದವರೆಗೆ ಅವರು ಭೋಜನ ಮಾಡಬಹುದು.

ಮಧ್ಯಾಹ್ನ ಆಹಾರ ತೆಗೆದುಕೊಂಡ ಪುರುಷರು ಸಂಜೆ ತರ್ಪಣ ನೀಡಬಹುದು. ಆದರೆ ಗ್ರಹಣಾನಂತರ ಪೂಜೆ ಮಾಡುವಂತಿಲ್ಲ.

ಗ್ರಹಣಾನಂತರ ಪೂಜೆ ಮಾಡಬೇಕಾದರೆ ಇಡಿಯ ದಿವಸ ಉಪವಾಸ ಇರಬೇಕು.

ಕೆಲವರು ಮಧ್ಯಾಹ್ನ 3-37 ರವರೆಗೆ ಅಶಕ್ತರು ಆಹಾರ ಸ್ವೀಕಾರ ಮಾಡಬಹುದು ಎಂದು ಮುದ್ರಿಸಿದ್ದಾರೆ. ಅದು ತಪ್ಪು.

ದಿವಸದಲ್ಲಿ ಐದು ಕಾಲಗಳು. ಪ್ರಾತಃಕಾಲ, ಸಂಗವ, ಮಧ್ಯಾಹ್ನ, ಅಪರಾಹ್ಣ ಮತ್ತು ಸಾಯಾಹ್ಣ ಎಂದು. ಸೂರ್ಯೋದಯದಿಂದ ಆರಂಭಿಸಿ ಪ್ರತಿಯೊಂದು ಕಾಲವೂ 144 ನಿಮಿಷಗಳಿರುತ್ತವೆ.

ಸೂರ್ಯೋದಯವಾದ 433 ನೆಯ ನಿಮಿಷಕ್ಕೆ ಅಪರಾಹ್ಣ ಆರಂಭವಾಗುತ್ತದೆ.

31 ನೆಯ ತಾರೀಕು ಸೂರ್ಯೋದಯ ಬೆಳಿಗ್ಗೆ 6:59ಕ್ಕೆ. ಅದಕ್ಕೆ ಏಳು ಗಂಟೆ ಹನ್ನೆರಡು ನಿಮಿಷಗಳನ್ನು ಸೇರಿಸಿದರೆ, ಅಪರಾಹ್ಣ

ಆರಂಭವಾಗುವದು ಮಧ್ಯಾಹ್ನ 2:13ಕ್ಕೆ. ಅಂದರೆ 2:12 ರ ವರೆಗೆ ಅಶಕ್ತರು ಆಹಾರ ಸ್ವೀಕರಿಸಬಹುದು. ಆ ನಂತರ ಸ್ವೀಕರಿಸತಕ್ಕದ್ದಲ್ಲ.

ಗ್ರಹಣಕಾಲದಲ್ಲಂತೂ ಮಕ್ಕಳಿಗೂ ಸಹ ಹಾಲು, ಹಣ್ಣು ನೀಡುವದನ್ನು ಸಹ ನೀಡಬೇಡಿ.

ಅತ್ಯಂತ ಅತ್ಯಂತ ಅನಿವಾರ್ಯ ಪ್ರಸಂಗದಲ್ಲಿ ಯಾರಿಗಾದರೂ ನೀರನ್ನೋ ಹಾಲನ್ನೋ (ಗಟ್ಟಿ ಆಹಾರ ಸರ್ವಥಾ ನಿಷಿದ್ಧ) ನೀಡಲೇಬೇಕಾದ ಅನಿವಾರ್ಯತೆ ಒದಗಿದಲ್ಲಿ ದೇವರಲ್ಲಿ ಕ್ಷಮಾಯಾಚನೆಯೊಂದಿಗೆ, ತೊಂದರೆಯಾಗದಿರಲಿ ಎಂಬ ಪ್ರಾರ್ಥನೆಯೊಂದಿಗೆ, ಗುರುಗಳ ಸ್ಮರಣೆ ಮಾಡುತ್ತ ನೀಡಿ.

ಗ್ರಹಣಕಾಲದಲ್ಲಿ ಆಹಾರ ಸೇವಿಸುವದು ನಿಷಿದ್ಧ.

## ಚಂದ್ರೋದಯದ ಸಮಯಕ್ಕೆ ಸ್ಪರ್ಶ ಸ್ನಾನ, ಸೂರ್ಯಾಸ್ತದ ಸಮಯಕ್ಕಲ್ಲ

ಕೆಲವರು ಸೂರ್ಯಾಸ್ತದ ಸಮಯಕ್ಕೆ ಸ್ನಾನ ಎಂದು ಮುದ್ರಿಸಿದ್ದಾರೆ. ಸೂರ್ಯಾಸ್ತವಾದರೆ ಮಾತ್ರ ಚಂದ್ರ ಕಾಣುತ್ತಾನೆ ಎಂಬ ತಪ್ಪು ಕಲ್ಪನೆಯಿಂದ ಉಂಟಾಗಿರುವ ಪ್ರಮಾದವಿದು.

ಶುಕ್ಲಪಕ್ಷಗಳಲ್ಲಿ ಚಂದ್ರನ ಉದಯ ಹಾಡಹಗಲೇ ಉಂಟಾಗುತ್ತದೆ, ಮತ್ತು ಚಂದ್ರ ಸ್ಪಷ್ಟವಾಗಿ ಕಣ್ಣಿಗೆ ಕಾಣುತ್ತಾನೆ. ಹೀಗಾಗಿ ಚಂದ್ರ ಕಾಣಲು ಸೂರ್ಯಾಸ್ತವಾಗಲೇಬೇಕು ಎನ್ನುವದು ತಪ್ಪು.

ಯಾವುದೇ ಗ್ರಹಣದಲ್ಲಿನ ನಿಯಮವೆಂದರೆ, ಗ್ರಹಣ ನಮಗೆ ಯಾವಾಗ ಗೋಚರವಾಗುತ್ತದೆಯೋ ಆಗ ಸ್ನಾನವನ್ನು ಮಾಡತಕ್ಕದ್ದು.

ಈಗ ಗ್ರಸ್ತೋದಯವಾಗುತ್ತಿರುವದರಿಂದ, ಸರಿಯಾಗಿ ಚಂದ್ರೋದಯದ ಸಮಯಕ್ಕೆ ಸ್ಪರ್ಶಸ್ನಾನವನ್ನು ಮಾಡಬೇಕು.

ಗ್ರಹಣ ಮೊದಲೇ ಆರಂಭವಾಗಿರುತ್ತದೆ. ಆದರೆ ಅದು ನಮಗೆ ಗೋಚರವಲ್ಲವಾದ್ದರಿಂದ ಅದರ ಆಚರಣೆಯೇ ಇರುವದಿಲ್ಲ.

ನಮಗೆ ಗೋಚರವಾಗುವದು ಚಂದ್ರೋದಯದಿಂದ. ಆ ಚಂದ್ರೋದಯಕ್ಕೆ ನಾವು ಸ್ಪರ್ಶದ ಸ್ನಾನವನ್ನು ಮಾಡಬೇಕು.

ವಿಜಯವಾಡದಲ್ಲಿ ಸೂರ್ಯಾಸ್ತ 6:03 ಕ್ಕೆ. ಆದರೆ ಚಂದ್ರೋದಯ 5:58ಕ್ಕೆ ಆಗುತ್ತದೆ. ಹೀಗಾಗಿ ಅಲ್ಲಿನವರು 5:58ಕ್ಕೆ ಚಂದ್ರಗ್ರಹಣವನ್ನು ಕಾಣುವದರಿಂದ ಅವರು ಆ ಸಮಯಕ್ಕೆ ಸ್ಪರ್ಶ ಸ್ನಾನವನ್ನು ಮಾಡಬೇಕು.

ಹಾಗೆಯೇ ಹುಬ್ಬಳ್ಳಿಯಲ್ಲೂ ಸಹ. 6:22ಕ್ಕೆ ಚಂದ್ರೋದಯ. 6:26ಕ್ಕೆ ಸೂರ್ಯಾಸ್ತ.

ನಾಳೆ ದಕ್ಷಿಣ ಭಾರತದಲ್ಲಿ 5:55 ರಿಂದ ಆರೂವರೆಯ ಒಳಗೆ ಚಂದ್ರೋದಯವಾಗುತ್ತದೆ.

ಪೂರ್ವದ ಚೆನ್ನೈನಲ್ಲಿ 6:07 ಕ್ಕೆ. ಪಶ್ಚಿಮದ ಉಡುಪಿಯಲ್ಲಿ 6:26 ಕ್ಕೆ. ಮಧ್ಯದ ಬೆಂಗಳೂರಿನಲ್ಲಿ 6:15ಕ್ಕೆ. ಹಾಗೆಯೇ ಮೈಸೂರಿನಲ್ಲಿ 6:20ಕ್ಕೆ.

ನಿಮ್ಮನಿಮ್ಮ ಊರಿನಲ್ಲಿ ಎಷ್ಟು ಹೊತ್ತಿಗೆ ಚಂದ್ರೋದಯವೋ ಅಷ್ಟು ಹೊತ್ತಿಗೆ ಸ್ಪರ್ಶದ ಸ್ನಾನವನ್ನು ಮಾಡಿ.

ಚಂದ್ರೋದಯ ಪ್ರತೀ ಸ್ಥಳಕ್ಕೆ ವಿಭಿನ್ನ. Moonrise in my place (ನಿಮ್ಮ ಊರಿನ ಹೆಸರು) ಎಂದು ಗೂಗಲಿನಲ್ಲಿ ಹುಡುಕಿದರೆ ನೀವಿರುವ ಸ್ಥಳದ ನಿಖರ ಚಂದ್ರೋದಯದ ಸಮಯ ದೊರೆಯುತ್ತದೆ.

ಆ ಸಮಯಕ್ಕೆ ಸರಿಯಾಗಿ, ಸ್ಪರ್ಶದ ಸ್ನಾನವನ್ನು ಮಾಡಿ.

## ಗ್ರಹಣದ ಕಾಲದ ಅನುಷ್ಠಾನಗಳು

ಎರಡು ಗಂಟೆಗೂ ಹೆಚ್ಚಿನ ಸಮಯ ಈ ಬಾರಿಯ ಗ್ರಹಣದಲ್ಲಿ ದೊರೆಯುವದರಿಂದ, ಅವಶ್ಯವಾಗಿ ಜಪ, ಪಾರಾಯಣಗಳಿಂದ ಸಮಯವನ್ನು ಸಾರ್ಥಕ ಮಾಡಿಕೊಳ್ಳಬೇಕು. ತಪ್ಪದೇ ಭಾಗವತ-ಮಧ್ವವಿಜಯಗಳನ್ನು ಶ್ರವಣ ಮಾಡಿ.

ಗ್ರಹಣಕಾಲದಲ್ಲಿ ಸಂಪೂರ್ಣ ಪೂಜೆಯನ್ನು ಮಾಡತಕ್ಕದ್ದಲ್ಲ.

ನಾವು ಗ್ರಹಣಸ್ನಾನ ಮಾಡಿದ ಬಳಿಕ, ಪ್ರತಿಮೆ ಸಾಲಿಗ್ರಾಮಗಳಿಗೂ ಅಭಿಷೇಕ ಮಾಡಿ ನೀರುಳಿಯದಂತೆ ಒರೆಸಿಡಬೇಕು.

ಗ್ರಹಣ ಮುಗಿದ ಬಳಿಕ ಮತ್ತೆ ಸ್ನಾನ ಮಾಡಿ ಪೂಜೆಯನ್ನು ಮಾಡಬೇಕು.

ಗ್ರಹಣಕಾಲದಲ್ಲಿ ದಾನ ಮಾಡಲು ಯೋಗ್ಯರಾದ ಬ್ರಾಹ್ಮಣರು ದೊರೆಯದೇ ಇದ್ದಲ್ಲಿ, ಸಂಕಲ್ಪವನ್ನು ಮಾಡಿ ಅವರಿಗೆ ನಂತರದಲ್ಲಿ ದಾನ ನೀಡಬಹುದು.

## ಆಶ್ಲೇಷಾನಕ್ಷತ್ರದವರಿಗೆ ಸೂಚನೆ

ಆಶ್ಲೇಷಾ ನಕ್ಷತ್ರದಲ್ಲಿ ಗ್ರಹಣ ಸಂಭವಿಸುತ್ತಿರುವದರಿಂದ ಆ ನಕ್ಷತ್ರದಲ್ಲಿ ಜನಿಸಿದವರು ನಾಳೆ ಯಾವುದೇ ರೀತಿಯ ಅಪಾಯದ ಕೆಲಸಗಳನ್ನು ಮಾಡಲು ಹೋಗಬೇಡಿ.

"ನ ವಾಸುದೇವಭಕ್ತಾನಾಮಶುಭಂ ವಿದ್ಯತೇ ಕ್ವಚಿತ್" ಎಂಬ ಮಾತಿನಂತೆ ಹರಿಗುರುಗಳ ಭಕ್ತರಿಗೆ ಸರ್ವಥಾ ಅಮಂಗಳವುಂಟಾಗುವದಿಲ್ಲ.

ಶ್ರೀರಾಘವೇಂದ್ರಾಯ ನಮಃ, ಇತ್ಯಾದಿಯಾಗಿ ಗುರುಗಳ ನಾಮವನ್ನು, ಮಧ್ವನಾಮ, ವಿಜಯಕವಚ ಮುಂತಾದವನ್ನು ಭಕ್ತಿಯಿಂದ ಪಠಿಸಿ.

ಶ್ರೀನರಸಿಂಹಾವತಾರದ ಚರಿತ್ರೆಯನ್ನು ಕೇಳಿ. ಯಾವುದೇ ತೊಂದರೆಯಾಗುವದಿಲ್ಲ.

Link to Narasimhavatara Upanyasas

## ಮೈಲಿಗೆ ಇರುವವರು ಏನು ಮಾಡಬೇಕು

ಮೃತಾಶೌಚ, ಜಾತಾಶೌಚ ಮತ್ತು ರಜಸ್ವಲೆಯಾಗಿರುವವರೂ ಸಹ ಸ್ಪರ್ಶ ಮತ್ತು ಮೋಕ್ಷ ಸ್ನಾನಗಳನ್ನು ಮಾಡಲೇಬೇಕು.

ದೇವರ ಹೆಸರನ್ನು ಪಠಿಸಬೇಕು. ಸ್ತೋತ್ರಗಳನ್ನು ಪಠಿಸಬಾರದು. ದಾನ ಮಾಡಬಾರದು.

ನಾಲ್ಕನೆಯ ದಿವಸದ ರಜಸ್ವಲೆಯರು ಗ್ರಹಣ ಕಾಲದಲ್ಲಿ ದೇವರಿಗೆ ನಮಸ್ಕಾರಗಳನ್ನು ಮಾಡಬಹುದು. ಮಧ್ವನಾಮ ಮುಂತಾದ ದೇವರ ನಾಮಗಳನ್ನು ಪಠಿಸಬಹುದು. ಸ್ತೋತ್ರಗಳನ್ನು ಪಠಿಸಬಾರದು. ದಾನ ಮಾಡಬಾರದು.

ಐದನೆಯ ನೀರಾಗಿದ್ದರೆ ಅವಶ್ಯವಾಗಿ ಸ್ತೋತ್ರಗಳನ್ನು ಪಠಿಸಬೇಕು. ದಾನ ಮಾಡಬಹುದು.

## ಶೂದ್ರರ ಆಚರಣೆ ಹೇಗೆ

ಶೂದ್ರರೂ ಸಹ ಸ್ಪರ್ಶ, ಮೋಕ್ಷಗಳ ಸ್ನಾನವನ್ನು ಆಚರಿಸಬೇಕು.

ದೇವರ ಹೆಸರು, ಗುರುಗಳ ಹೆಸರು, ದೇವರ ಹಾಡುಗಳು, ತಮಗೆ ಪಠಿಸಲು ಯೋಗ್ಯವಾದ ಸ್ತೋತ್ರಗಳನ್ನು ಪಠಿಸಬಹುದು. ಯಥಾಶಕ್ತಿ ದಾನ ಮಾಡಬಹುದು.

ಶೂದ್ರರೂ ಯಾವುದನ್ನು ಮಂತ್ರಪೂರ್ವಕವಾಗಿ ಮಾಡಬೇಕಾಗಿಲ್ಲ. ದೇವರ ಸ್ಮರಣೆಯನ್ನು ಮಾಡುತ್ತ ಸ್ನಾನ, ದೇವರಿಗೆ ಭಕ್ತಿಯಿಂದ ನಮಸ್ಕಾರ ಮತ್ತು ಯಥಾಶಕ್ತಿ ದಾನವನ್ನು ಮಾಡತಕ್ಕದ್ದು.

**ಅನಿವಾರ್ಯವಾಗಿ ಸ್ಪರ್ಶಸ್ನಾನ ಮಾಡಲಾಗದವರೂ, ಮೋಕ್ಷಸ್ನಾನ ಮಾಡಲೇಬೇಕು.**

ಸಕಲ ಸಜ್ಜನರಿಗೂ ಗ್ರಹಣದಿಂದ ಯಾವ ರೀತಿಯ ಅಶುಭ ಫಲಗಳೂ ಉಂಟಾಗದಿರಲಿ,

ಗ್ರಹಣದ ಸಮಯದಲ್ಲಿ ಶ್ರೇಷ್ಠಕ್ರಮದಲ್ಲಿ ನಿಮ್ಮಿಂದ ಸಾಧನೆ ನಡೆಯಲಿ,

ಸೂರ್ಯ-ಚಂದ್ರಾದಿ ಸಮಸ್ತ ತತ್ವಾಭಿಮಾನಿ ದೇವತೆಗಳ ಅನುಗ್ರಹ ನಿಮ್ಮೆಲ್ಲರ ಮೇಲಾಗಲಿ ಎಂಬ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

**ವಿಶೇಷ ಸೂಚನೆ —** ಗ್ರಹಣದ ಕುರಿತ ವಿವರಗಳುಳ್ಳ ಲೇಖನಗಳ ಲಿಂಕುಗಳನ್ನು ಮುಂದಿನ ಪುಟದಲ್ಲಿ ನೀಡಿದ್ದೇನೆ.

## ಗ್ರಹಣದ ಕುರಿತ ಲೇಖನಗಳ ಲಿಂಕುಗಳು

ಕೆಳಗಿನ ಯಾವುದೇ ಶಬ್ದವನ್ನು ಒತ್ತಿದರೆ ಆಯಾ ಲೇಖನ ತೆರೆದುಕೊಳ್ಳುತ್ತದೆ.

**ಗ್ರಹಣದ ಅನುಷ್ಠಾನಗಳು**

ಗ್ರಹಣದ ಸಂದರ್ಭದಲ್ಲಿ ಮಾಡಬೇಕಾದ, ಮಾಡಬಾರದ, ಮಾಡಬಹುದಾದ, ಮಾಡಲೇಬೇಕಾದ ಕರ್ಮಗಳ ಕುರಿತ ಚಿಂತನೆ ಇಲ್ಲಿದೆ.

**ಗ್ರಹಣಕಾಲದಲ್ಲಿ ದಿಗ್ದೇವತೆಗಳ ಪ್ರಾರ್ಥನೆ**

ಗ್ರಹಣಕಾಲದಲ್ಲಿ ಎಂಟೂ ದಿಕ್ಕಿನ ದೇವತೆಗಳಿಗೆ ಪ್ರಾರ್ಥನೆ ಸಲ್ಲಿಸಬೇಕೆಂದು ಶಾಸ್ತ್ರ ವಿಧಿಸುತ್ತದೆ. ಆ ಪ್ರಾರ್ಥನಾಶ್ಲೋಕಗಳು ಮತ್ತು ಅವುಗಳ ಅರ್ಥವಿವರಣೆ ಇಲ್ಲಿದೆ.

**Link to download Vishwanandini App**

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491